**ಪ್ರಧಾನ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ. ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 181/2017**

**ಸಿ ಡಬ್ಲೂ - 8**

**ಪಿ ಡಬ್ಲೂ - 5**

| | |
|---|---|
| ಸಾಕ್ಷಿ ಹೆಸರು - | ಅಜಾಜ್ ಅಹ್ಮದ್ |
| ತಂದೆಯ ಹೆಸರು- | ಯೂನೂಸ್ ಅಹ್ಮದ |
| ವಯಸ್ಸು - | 30 ವರ್ಷಗಳು |
| ಉದ್ಯೋಗ - | ಖಾಸಗಿ ಕೆಲಸ |
| ವಾಸಸ್ಥಳ - | ಹೊಸಪೇಟೆ |

**ಸಾಕ್ಷಿಯನ್ನು ದಿನಾಂಕಃ 13-03-2023 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಆರೋಪಿ ನನ್ನ ತಮ್ಮ. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ನನ್ನ ತಮ್ಮ ವಿದೇಶಕ್ಕೆ ಹೋಗಿ ಸಂಪಾದನೆ ಮಾಡಬೇಕೆಂದು ಪಾಸ್ ಪೊರ್ಟ ಗೆ ಅರ್ಜಿ ಹಾಕಿದ್ದ ಅಂದರೆ ನನಗೆ ಗೊತ್ತಿಲ್ಲ ಅದಕ್ಕಾಗಿ ದಿಃ 20-11-2014 ರಂದು ಪೋಲಿಸ ಠಾಣೆಯವರು ನನ್ನನ್ನು ಮತ್ತು ನನ್ನ ನೆರೆಕೆರೆಯವರನ್ನು ಚಾಸಾ - 4 ಮತ್ತು 5 ರವರನ್ನು ಠಾಣೆಗೆ ಕರೆದಿದ್ದರು ಅಂದರೆ ಸರಿ.

**ಸಿ ಡಬ್ಲೂ - 8**
**ಪಿ ಡಬ್ಲೂ - 5**

ಆರೋಪಿ ನನ್ನ ಜನನ ಪ್ರಮಾಣ ಪತ್ರ ಮತ್ತು ಎಸ್ ಎಸ್ ಎಲ್ ಸಿ ದಾಖಲಾತಿಗಳನ್ನು ನೀಡಿ ಸುಳ್ಳು ಹೇಳಿ ಪಾಸ್ ಪೊರ್ಟ ತೆಗೆದುಕೊಳ್ಳಲು ಅರ್ಜಿ ಹಾಕಿರುತ್ತಾನೆ ಅಂದರೆ ಸರಿಯಲ್ಲ. ಆರೋಪಿ ನೆರೆಹೊರೆಯವರನ್ನು ಕರೆದುಕೊಂಡು ಆತನೇ ಅಜಾಜ್ ಅಹ್ಮದ ಅಂತಾ ಸುಳ್ಳು ಹೇಳಿಕೆ ಹೇಳಿಸಿದ್ದಾನೆ ಅಂದರೆ ಸರಿಯಲ್ಲ. ಇದಾದ ನಂತರ ಆರೋಪಿ ಮೇಲೆ ಕೇಸ್ ಆದ ನಂತರ ನಾನು ಈ ರೀತಿ ಸುಳ್ಳು ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ತನ್ನ ಹೇಳಿಕೆಯನ್ನು ನಿರಾಕರಿಸಿದ ಕಾರಣ ಆತನ ಹೇಳಿಕೆಯನ್ನು ನಿಪಿಃ 20 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಪಿ ವಾಯ್ ವಕೀಲರಿಂದಃ**

ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಏನೆಲ್ಲಾ ಬರೆದಿದೆ ಅಂತಾ ನನಗೆ ಗೊತ್ತಿಲ್ಲ ಅಂದರೆ ಸರಿ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.